<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್ ಸಂಖ್ಯೆ.**736/*2022***                ಪಿ.ಡಬ್ಲೂ .1

ದಿನಾಂಕಃ 17-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ- **6** ನೇ ಪ್ರತಿವಾದಿ ಪರ ಪಿ.ಎಂ.ಜಿ. ವಕೀಲರಿಂದಃ-</u>

ಉಳಿದ ವಾದಿಯವರು ಅವರ ಪರ ಸಾಕ್ಷಿ ನುಡಿಯಲು ನನಗೆ ಅಧಿಕಾರ ನೀಡಿದ್ದಾರೆ. ಪತ್ರ ಬರೆದುಕೊಟ್ಟಿಲ್ಲ. ಪ್ರಮಾಣ ಪತ್ರ ಮತ್ತು ವಾದ ಪತ್ರವನ್ನು ಸಲ್ಲಿಸಲು ಎಲ್ಲಾ ವಾದಿಯರಾದ ನಾವು ಮಾಹಿತಿ ನೀಡಿರುತ್ತೇವೆ. ಈ ದಾವೆಯನ್ನು ಭಾಗಕ್ಕಾಗಿ ಸಲ್ಲಿಸಿದ್ದೇವೆ. ಮುನಿಸಾದಪ್ಪ ಮತ್ತು ವರದಮ್ಮ ನಮ್ಮ ಅಜ್ಜಿ-ತಾತ ಎಂದರೆ ಸರಿ. ಅವರಿಗೆ ರಾಮತಿಮ್ಮಯ್ಯ, ಲಕ್ಷಯ್ಯ, ರಾಮಯ್ಯ, ಮತ್ತು ಅಮ್ಮಕ್ಕ ಎಂಬ ಮಕ್ಕಳು ಎಂದರೆ ಹೌದು. ನಿಪಿ. 1 ರಲ್ಲಿ ರಾಮತಿಮ್ಮಯ್ಯ ಮತ್ತು ಅಮ್ಮಕ್ಕರವರನ್ನು ಸೇರಿಸಿಲ್ಲ ಎಂದರೆ ಹೌದು.

ಮುನಿಸಾದಪ್ಪ ಮತ್ತು ವರದಮ್ಮ ರವರಿಗೆ ಎಷ್ಟು ಆಸ್ತಿಗಳು ಸ್ವಯಾರ್ಜಿತ ಮತ್ತು ಪಿತ್ರಾರ್ಜಿತವಾಗಿ ಬಂದಿರುತ್ತವೆ ಎಂದು ಗೊತ್ತಿಲ್ಲ. ಮುನಿಸಾದಪ್ಪನವರಿಗೆ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರು ಎಷ್ಟು ಜನ ಎಂದು ಗೊತ್ತಿಲ್ಲ. ಮುನಿಸಾದಪ್ಪನವರು ಜೀವಂತ ಇದ್ದ ಕಾಲದಲ್ಲಿ ಅವರ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರ ನಡುವೆ ವಿಭಾಗ ಆಗಿರುವುದಿಲ್ಲ. ಅವರ ನಡುವೆ ವಿಭಾಗ ಆಗಿಲ್ಲದೆ ಇರುವ ವಿಚಾರ ನನಗೆ ನನ್ನ ತಂದೆ ಹೇಳಿರುತ್ತಾರೆ. ನನ್ನ ತಂದೆಯ ಅಣ್ಣತಮ್ಮಂದಿರ ನಡುವೆ ಯಾವುದೇ ವಿಭಾಗ ಆಗಿಲ್ಲ.

ನಿಪಿ. 13 ರಲ್ಲಿ ಲಕ್ಷಯ್ಯ, ಮುನಿತಿಮ್ಮಯ್ಯ ಮತ್ತು ಬಲರಾಮಯ್ಯನವರ ಹೆಸರುಗಳು ಪ್ರತ್ಯಕವಾಗಿ ನಮೂದು ಇದೆ ಎಂದರೆ ಹೌದು. ಅದೇ ನಿಪಿ.14 ರಲ್ಲಿಯೂ ಸಹ ಪ್ರತಿವಾದಿಗಳು ಮತ್ತು ಇತರರ ಹೆಸರುಗಳು ಪ್ರತ್ಯಕವಾಗಿ ನಮೂದು ಇದೆ ಎಂದರೆ ಹೌದು. ನಾನು ಈ ದಾವೆಯನ್ನು 4-5 ಆಸ್ತಿಗಳ ಮೇಲೆ ಸಲ್ಲಿಸಿದ್ದೇನೆ. ದಾವಾ ಆಸ್ತಿಗಳು ನನ್ನ ತಾತನಿಗೆ ಗ್ರ್ಯಾಂಟ್ ಮೂಲಕ ಬಂದಿರುತ್ತವೆ. ಲಕ್ಷ್ಮಯ್ಯ ಮತ್ತು ರಾಮಯ್ಯನವರಿಗೆ ಸದರಿ ಗ್ರ್ಯಾಂಟ್  1971 ರಲ್ಲಿ ಆಗಿರುತ್ತವೆ. ಆ ಕಾಲಕ್ಕೆ ನನ್ನ ತಂದೆಯ ಅಣ್ಣತಮ್ಮಂದಿರು ಬೇರೆ ಬೇರೆ ವಾಸ ಇದ್ದರು.

ದಾವಾ ಆಸ್ತಿ ಐಟಂ ನಂ. 3 ನ್ನು 6 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 6 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆಂದು ಗೊತ್ತಿಲ್ಲ. ದಾವಾ ಆಸ್ತಿ ಐಟಂ ನಂ. 3 ನ್ನು 6 ನೇ ಪ್ರತಿವಾದಿ ಖರೀದಿಸಿದ ನಂತರ ನಾನು ಸದರಿ ಆಸ್ತಿಯಲ್ಲಿ ವ್ಯವಸಾಯ ಮಾಡಿಲ್ಲ ಎಂದರೆ ಹೌದು.

ದಾವಾ ಐಟಂ ನಂ. 1 ರಲ್ಲಿ ನಾನು ಯಾವತ್ತೂ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಿನಾಂಃ 24-06-1995 ರಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ. 12 ರಲ್ಲಿ ಲಕ್ಷ್ಮಯ್ಯನಿಗೆ 1 ಎಕರೆ 12 ಗುಂಟೆ, ರಾಮಯ್ಯನವರಿಗೆ 1 ಎಕರೆ 12 ಗುಂಟೆ ಸಮಭಾಗವಾಗಿ ಹಂಚಿಕೆಯಾಗಿದೆ ಎಂದರೆ ಸುಳ್ಳು. ಸದರಿ ವಿಭಾಗದಂತೆ ಆಸ್ತಿಗಳು ಹಂಚಿಕೆಯಾಗಿರುವ ವಿಚಾರ ನನಗೆ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.